**ಪಿಡಬ್ಲ್ಯೂ:1 ಸಿ.ಸಿ.ನಂ. 23606-2016**

**ಪಿಡಬ್ಲ್ಯೂ:1 ಸಿ.ಸಿ.ನಂ. 23606-2016**

**ದಿನಾಂಕಃ 16.01.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ವಕೀಲರಿಂದಃ**

ನಾನು ಪಿಯುಸಿ ಓದಿ ಗೃಹಿಣಿಯಾಗಿರುತ್ತೇನೆ. ಆರೋಪಿ 2015ರ ಮುಂಚೆ 4-5 ವರ್ಷದಿಂದ ನನ್ನ ಗಂಡನಿಗೆ ಪರಿಚಯ. ಆರೋಪಿ ನನ್ನ ಗಂಡನಿಗೆ ಯಾರ ಕಡೆ ಇಂದ ಪರಿಚಯವಾದರೆಂದು ನನಗೆ ಗೊತ್ತಿಲ್ಲ. ನನ್ನ ಗಂಡ ಬಿಲ್ಡಿಂಗ ನಿರ್ಮಿಸುವುದು, ಕಟ್ಟಡದ ಸಾಮಾಗ್ರಿಗಳನ್ನು ಮಾರಾಟ ಮಾಡುವುದು ಹಾಗೂ ರಿಯಲ ಎಸ್ಟೇಟ ವ್ಯವಹಾರವನ್ನು ಮಾಡುತ್ತಿದ್ದರು. ಸಹಕಾರ ನಗರದಲ್ಲಿ ನನ್ನ ಗಂಡ ಕಚೇರಿ ನಡೆಸುತ್ತಿದ್ದರು. ನನ್ನ ಗಂಡ ರಿಯಲ ಎಸ್ಟೆಟ ವ್ಯವಹಾರ ಮಾಡುತ್ತಿದ್ದರೆಂದು ತೋರಿಸಲು ದಾಖಲಾತಿಗಳು ಲಬ್ಯವಿಲ್ಲ ಆದರೆ ನಾಮಫಲಕ ಬಳಸುತ್ತಿದ್ದರು. ಸದರಿ ನಾಮಫಲಕದಲ್ಲಿ ನಿರ್ದಿಷ್ಟವಾಗಿಯಾವ ವಿಳಾಸ ನಮೂದಿಸಿದ್ದಾರೆಂದು ನನಗೆ ಗೊತ್ತು ಆದರೆ ಸಂಪೂರ್ಣ ವಿಳಾಸ ನನಗೆ ಗೊತ್ತಿಲ್ಲ, ಅದು 7ನೇ ಅಡ್ಡರಸ್ತೆ, ಸಹಕಾರ ನಗರವಾಗಿರುತ್ತದೆ. ನನ್ನ ಗಂಡ ಕಟ್ಟಡ ನಿರ್ಮಿಸುವುದು, ಕಟ್ಟಡದ ಸಾಮಾಗ್ರಿಗಳನ್ನು ಮಾರಾಟ ಮಾಡುವುದು ಸಂಬಂದಪಟ್ಟಂತೆ ದಾಖಲೆ ಲಭ್ಯವಿಲ್ಲ.

ಆರೋಪಿ ನನ್ನ ಗಂಡನ ಬಳಿ ರೂ.75 ಲಕ್ಷವನ್ನು ಮಾರ್ಚ 2015 ಇಸವಿಯಲ್ಲಿ ನನ್ನ ಮನೆಗೆ ಬಂದು ಕೇಳಿರುತ್ತಾರೆ, ಆಗ ಅವರೊಂದಿಗೆ ಯಾರು ಬಂದಿಲ್ಲ. ದಿನಾಂಕವು ನಿಖರವಾಗಿ ನನಗೆ ಗೊತ್ತಿಲ್ಲ. ಆರೋಪಿಗೆ ಹಣ ಕೊಡುವ ಕಾಲಕ್ಕೆ ನಾನು ಹಾಜರಿದ್ದೆ. ಆರೋಪಿ ನನ್ನ ಗಂಡನ ಬಳಿ ಯಾವತ್ತು ಹಣ ಕೇಳಿದ್ದರೆಂದು ನನಗೆ ಗೊತ್ತಿಲ್ಲ. ನನ್ನ ಗಂಡ ನಗದಾಗಿ ರೂ.

ಸಾವಿರ ಹಾಗೂ ರೂ. 500 ಮುಖಬೆಲೆನೋಟುಗಳನ್ನು ಕೊಟ್ಟರು. ರೂ.75 ಲಕ್ಷ ಹಣ ನಗದಾಗಿ ನಮ್ಮ ಮನೆಯಲ್ಲಿತ್ತು.

**ಮುಂದುವರೆದ ಪಾಟೀ ಸವಾಲಿಗೆ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

(ಓ.ಹೇ.ಕೇ.ಸ.,)

**18ನೇ ಎ.ಸಿ.ಜೆ .ಎಂ.,**

**ಬೆಂಗಳೂರು.**